ಇಪ್ಪತ್ತೈದು ಇಲೆಕ್ಟ್ರಾನಿಕ್ ಟ್ರಾನ್ಸ್‌ಫರ್ ಮಾಡ್ಸಿದೀರಲ್ಲ. ಇನ್ನೂ ಹದಿನೈದು ಅಕೌಂಟಲ್ಲೆ ಇದೆ. ನಲವತ್ತು ಹೇಗೆ ಮರುಪಾವತಿ ಮಾಡತೀರ? ಅದೂ ನಾಕುದಿನ ಹಿಂದಷ್ಟೆ ಮಂಜೂರಾದ್ದು?' ಅಂದವರು, '...ಅಲ್ಲಾ ಸೇವಿಂಗ್ಸ್ ಅಕೌಂಟಿಗೆ ಎಷ್ಟು ಬೇಕಾದ್ರು ಹಾಕ್ಬಹುದು. ಅದರ ಮೂಲ ಮಾತ್ರ ಸರಕಾರಕ್ಕೆ ವಿವರಿಸಬೇಕಾದ್ದು ನಿಮ್ಮ ಹೊಣೆ ಅಷ್ಟೆ! ಕೃಷಿ ಉತ್ಪನ್ನ ಅಷ್ಟೆಲ್ಲಾ ಮನೇಲಿಟಕಂಡರಾ...' ಪರಿಚಯದ ಸಹಾನುಭೂತಿಯಲ್ಲಿ ವಿಚಾರಿಸಿದರು. ಹಣೆಮೇಲೆ ಬೆವರು ಮೂಡಿ ಆಮೇಲೆ ಬರತೇನೆ ಅಂತ ಎದ್ದು ಬಂದರು. ಪ್ರಭಾವಿ ಜನ ಆಗಲೆ ಕೋಟಿಗಟ್ಲೆ ಬದಲಾಯಿಸಿಕೊಳ್ಳುತ್ತಿದಾರಂತೆ, ಪರ್ಸೆಂಟೇಜ್ ಮೇಲೆ ಬದಲಾಯಿಸೋ ಏಜೆಂಟುಗಳು ಸಬ್ ಏಜೆಂಟುಗಳು ಇದಾರಂತೆ ಅಂತ ಸುದ್ದಿ ಅಲ್ಲಲ್ಲಿ ಸಿಗುತ್ತಿತ್ತು. ಚೀಲಗಟ್ಲೆ ಹಳೆ ನೋಟು ಸಿಕ್ಕಿಹಾಕಿಕೊಂಡ ಸುದ್ದಿಯನ್ನು ಟೀವಿ ರಾಚುತ್ತಿತ್ತು. ಧೈರ್ಯಮಾಡಿ ಪರಿಚಯದ ಅಂಗಡೀಲಿ, ಗುರುತಿನವರಲ್ಲಿ ಸುಮ್ಮನೆ ಎಂಬಂತೆ ವಿಚಾರಿಸಿದರು. 'ಎಲ್ಲ ಹೇಳತಾರಪ್ಪ, ನಂಗೂ ಗೊತ್ತಿಲ್ಲ' ಅಂತ ಉತ್ತರ ಸಿಕ್ಕಿತು. 'ಯಾಕೆ ಹೆಗಡೇರು ಎಷ್ಟಿಟ್ಟಿದೀರಪಾ? ನಂಗೂ ಅಷ್ಟು ಕೊಡಿ...' ಅಂತ ತಮಾಷೆಗಂದರೆ ಹೊಕ್ಕಳ ಹತ್ತಿರ ಚುಳುಕೇಳುವುದು ತನಗೆ ಮಾತ್ರ ಗೊತ್ತಾಗುವ ಸತ್ಯ. ಸಾವಿರದ ನೋಟಿಗೆ 'ಆರೆಂಜ್' ಐದುನೂರದ್ದಕ್ಕೆ 'ಲೆಮನ್' ಕೋಡ್‌ವರ್ಡ್ ಅಂತ ಸುದ್ದಿ ಸಿಕ್ಕಿತು. ಒಂದು ಪಾನ್‌ಬ್ರೋಕರ್ ಅಂಗಡಿಗೆ ಹೋಗಿ ಆರೆಂಜ್ ಲೆಮನ್ ತಗೋತೀರ ಅಂತ ಪಿಸುದನಿಯಲ್ಲಿ ವಿಚಾರಿಸಿದರು. ಆತ ಇವರನ್ನ ಪಿಳಿಪಿಳಿ ನೋಡಿದ. ಹಿಂದೆ ಬಂದುಬಿಟ್ಟರು. ದಿನಾ ಇವರ ಪೇಟೆ ತಿರುಗಾಟ ಗಿರಿಜಾಗೆ ವಿಚಿತ್ರವೆನ್ನಿಸಿತು. ಏನೋ ಹುಡುಕುವಾಗ ಮೆತ್ತಿನ ಕಪಾಟಿನಲ್ಲಿ ಕಂಡದ್ದಕ್ಕೆ ಗಾಬರಿಯಾದರು. 'ಅಷ್ಟೆಲ್ಲ ನೋಟು! ಎಲ್ಲಿಂದ?' ಕೇಳಿದ್ದಕ್ಕೆ ನಿನಗದು ಬೇಡ ಅನ್ನುವ ಗದರಿಕೆ ಸಿಕ್ಕಿತು. 'ಜಗನ್ನಾಥನದ್ದೇನಾದ್ರೂ...' ಸುರುಮಾಡಿದ್ದಕ್ಕೆ ಮುಂದುವರಿಸಲು ಕೊಡದೆ ಸುಟ್ಟುಬಿಡುವಂತೆ ನೋಡಿದರು. ಇವರ ಪರಿಗೆ 'ಹೆಗಡೇರ ಹತ್ರ ದೊಡ್ಡ ಪ್ರಮಾಣದಲ್ಲೆ ಹಳೇ ನೋಟಿರಬಹುದು ಕಾಣತದೆ' ಅಂತ ಪರಿಚಿತರಲ್ಲಿ ಗುಸುಗುಸು ಸುರುವಾಯಿತು. ಸುಮಂತ ಮತ್ತೆ ಫೋನು ಮಾಡಿದಾಗ, 'ಹಳೇನೋಟು ಕೊಡಲೇನೋ, ಅವಳು ತಗೋತಾಳ?...' ಕೇಳಿದರು. 'ಸಾಲ ಅಂದ್ಯಲ್ಲಪ್ಪಾ? ಅಕೌಂಟಿಂದ ನನ್ನ ಅಕೌಂಟಿಗೆ ಟ್ರಾನ್ಸ್‌ಫರ್ ಮಾಡತಾರೆ. ಅದಕ್ಕೆ ರಿಸ್ಟ್ರಿಕ್ಷನ್ನಿಲ್ಲ. ಇವತ್ತೆ ಕಳಿಸು...' ಅಂದವ, '...ಏನಂದೆ ಹಳೇನೋಟ? ಅಷ್ಟೆಲ್ಲ ಮನೇಲಿ ಹ್ಯಾಗೆ?' ಅಂತ ಪ್ರಶ್ನೆ ಮಾಡಿದ. ಉತ್ತರಿಸದೆ ಕರೆ ತುಂಡರಿಸಿದರು. ಕ್ರಮೇಣ ಒತ್ತಡ ಹೆಚ್ಚು ಮಾಡತಾ ಇದಾನೆ. ತನ್ನ ಪಾಲಿನ ತೋಟ ಮಾರಿಬಿಡಿ ಅನ್ನುವ ನಿರ್ದಾಕ್ಷಿಣ್ಯ ಕ್ರೌರ್ಯಕ್ಕೂ ಹೋಗಿಬಿಡಬಹುದು. ಎರಡು ಹೆಣ್ಣುಗಳ ಮಧ್ಯದ ಅವನ ಸ್ಥಿತಿ ಯಾವ ಮಟ್ಟದ್ದೊ ಗೊತ್ತಿಲ್ಲ. ಮಾದೇವಿಯದು ಬೇಡಿಕೆ ದನಿ. ಆದರೆ ಹಡಬೆ ಹೆಂಗ್ಸು, ಯಾವಾಗ ಬೇಕಿದ್ರು ದನಿ ಜೋರಾಗಬಹುದು! ಎಲ್ಲಾ ಬ್ಯಾಂಕ್ ಖಾತೆಗೆ ಹಾಕಿಬಿಡುವ, ಆಮೇಲೇನಾಗತದೊ ನೋಡೇಬಿಡುವ ಅನ್ನುವ ಮೊಂಡುಕ್ರೋಧ ಮೂಡಿತು. ಒಂದೂಕಾಲು ಕೋಟಿಯ ರಾಶಿ ನೋಟುಗಳನ್ನು ನೋಡುವಾಗ ಅಧೈರ್ಯ ಹೊಕ್ಕಿತು. ಅಲ್ಲಲ್ಲಿ ಜನ ಸಿಕ್ಕಿಹಾಕಿಕೊಂಡಿದ್ದು, ರಾಶಿರಾಶಿ ನೋಟುಗಳ ಜಪ್ತಿ, ಕೆರೆ ದಂಡೆ ಮೇಲೆ ಚೆಲ್ಲಾಡಿದ, ಕಸದಲ್ಲಿ ಬಿದ್ದ ನೋಟುಗಳ ಕಟ್ಟು ಅಂತೆಲ್ಲ ಟೀವಿಯಲ್ಲಿ ಸತತ ಸುದ್ದಿ ಬಿತ್ತರವಾಗುತ್ತಿತ್ತು. ಊಟ ತಿಂಡಿಯಲ್ಲಿ ಆಸಕ್ತಿ ಕಮ್ಮಿಯಾಗಿತ್ತು.

ರಾತ್ರಿ ಹೆಂಡತಿ ಟೀವಿ ನೋಡುತ್ತಿದ್ದಾಗ ಕೆಲದಿನಗಳ ರೂಢಿಯಂತೆ ಮತ್ತೊಂದು ಕುರ್ಚಿಯಮೇಲೆ ಬೆರ್ಚಪ್ಪನಂತೆ ನೀರಸವಾಗಿ ಕುಳಿತಿದ್ದರು. ಅಮೆರಿಕದ ವಿಜ್ಞಾನಿಯೊಬ್ಬ ನಿಖರ ವೈಜ್ಞಾನಿಕ ಕಾರಣಗಳ ಸಮೇತ ವಿವರಿಸುತ್ತಿದ್ದ. ಪುರಾತನ ಭಾರತೀಯರ, ಇಂಕಾ, ಸುಮೇರಿಯನ್